
# ನಗುವ ಬುದ್ಧ



ಎಲ್ಲಿಂದಲೊ ಒಂದು ಬುದ್ಧನ ತಂದು
ಪೂಪ ಇರಿಸಿದ್ದಾಳೆ ಮೇಜಿನ ಮೇಲೆ

ಚಕ್ಕಳ ಮಕ್ಕಳ ಮಕ್ಕಳ ದೇವರು
ನಗುವನು ಏನೇ ಕೇಳಿದರು

ಹಾಲು ಬೇಕಾ ಬುದ್ಧಾ
ಅಂದರೆ ನಗುವನು
ಅನ್ನದೆ ಇದ್ದರು ನಗುವನು

ತಿಂಡಿ ತಿನ್ತೀಯ ಬುದ್ಧಾ
ಅಂದರೆ ನಗುವನು
ಅನ್ನದೆ ಇದ್ದರು ನಗುವನು

ಊಟ ಮಾಡ್ತೀಯ ಬುದ್ಧಾ
ಅಂದರೆ ನಗುವನು
ಅನ್ನದೆ ಇದ್ದರು ನಗುವನು

ಆಟಕೆ ಬರ್ತೀಯ ಬುದ್ಧಾ
ಅಂದರೆ ನಗುವನು
ಅನ್ನದೆ ಇದ್ದರು ನಗುವನು

ಮಗ್ಗಿ ಹೇಳ್ತೀಯ ಬುದ್ಧಾ
ಅಂದರೆ ನಗುವನು
ಅನ್ನದೆ ಇದ್ದರು ನಗುವನು

ಆದರು ಎಲ್ಲಿಂದ್ಲೊ ಕೇಳಿಸೋ–
ದೊಂದೊಂದ್ಸಲ
'ಒಂದೊಂದ್ಲ ಒಂದ್ಲ'

ಅಚ್ಚರಿಯಿಂದ ನೋಡ್ತಾಳೆ ಪೂಪ
ನಗುತಾ ಇರುವನು ಬುದ್ಧ
ಕೊಡಿರವನಿಗೊಂದು ಗುದ್ದ!